

## ಸುಖನಿದ್ರೆಯಿಂದ ಸುದೀರ್ಘ ನೆನಪು

ಆಯಾ ದಿನದ ಘಟನಾವಳಿಗಳು ನೆನಪುಗಳಾಗಿ ಮೆದುಳಿನಲ್ಲಿ ಶೇಖರಗೊಳ್ಳುತ್ತವೆ. ರಾತ್ರಿ ನಿದ್ರೆಯ ಸಂದರ್ಭದಲ್ಲಿ ಎನ್‌ಕೋಡ್ ಆಗಿರುವ ನೆನಪುಗಳೆಲ್ಲಾ ಡಿಕೋಡ್‌ಗಳಾಗಿ ಚಲನಚಿತ್ರದಂತೆ ಬಂದು ಹಾದುಹೋಗುತ್ತದೆ. ಇಂಥ ನೆನಪುಗಳಲ್ಲಿ ಉಪಯುಕ್ತವಾದ ಕೆಲವು ಮಾತ್ರ ಭವಿಷ್ಯದ ದೃಷ್ಟಿಯಿಂದ ಹಾಗೇ ಉಳಿಸಿಕೊಂಡು ಬಿಡುತ್ತದೆ ಎಂದು ಜರ್ಮನಿಯ ಲುಬೆಕ್ ವಿಶ್ವ ವಿದ್ಯಾಲಯದ ಸಂಶೋಧನಾ ತಂಡ ತಿಳಿಸಿದೆ.

ಮನುಷ್ಯನ ಮೆದುಳು ಪ್ರತಿನಿತ್ಯ ಸಾಕಷ್ಟು ಮಾಹಿತಿಗಳನ್ನು ತನ್ನೊಳಗೆ ಶೇಖರಿಸಿಡಬಹುದಾದಷ್ಟು ಸಾಮರ್ಥ್ಯ ಹೊಂದಿದೆ. ಆದರೆ ಅವುಗಳಲ್ಲಿ ಕೆಲವನ್ನು ಬಹುಬೇಗನೆ ಮರೆತುಬಿಡುತ್ತದೆ. ಇಂಥವುಗಳಲ್ಲಿ ಯಾವುದು ಅಗತ್ಯ ಯಾವುದು ಅನಗತ್ಯ ಎನ್ನುವುದನ್ನು ಮೆದುಳು ಹೇಗೆ ನಿರ್ಧರಿಸಲಿದೆ ಎನ್ನುವುದರ ಕುರಿತು ಈ ತಂಡ ಅಧ್ಯಯನ ನಡೆಸಿದೆ.

ಇದಕ್ಕಾಗಿಯೇ 191 ಸ್ವಯಂಸೇವಕರನ್ನು ಪ್ರಯೋಗಕ್ಕೆ ಬಳಸಿಕೊಳ್ಳಲಾಯಿತು. ಪ್ರಯೋಗದ ಮೊದಲ ಚರಣದಲ್ಲಿ 40 ಜೋಡಿ ಪದಗಳನ್ನು ಕಲಿಯಲು ಹೇಳಲಾಯಿತು. ದ್ವಿತೀಯ ಚರಣದಲ್ಲಿ ಪ್ರಾಣಿ ಹಾಗೂ ವಸ್ತುಗಳ ಚಿತ್ರಗಳಿರುವ ಇಸ್ಪೀಟ್ ಎಲೆಗಳನ್ನು ಬಳಸಿ ಆಡುವುದು ಹಾಗೂ ಆಟದ ಮೇಲೆ ಗಮನ ಇಡಲು ಹೇಳಲಾಯಿತು.

ಇವೆಲ್ಲದರ ನಡುವೆ ಅರ್ಧ ಮಂದಿಗೆ ಪ್ರತಿ ಚರಣದ ನಡುವೆ ಮಲಗಲು ಹೇಳಲಾಯಿತು. ಅಂತಿಮವಾಗಿ ಫಲಿತಾಂಶ ನೋಡಿದಾಗ ನಿರೀಕ್ಷೆಯಂತೆ ನಡುವೆ ನಿದ್ರೆ ಮಾಡದವರಿಗಿಂತ ನಿದ್ರೆ ಮಾಡಿದವರ ನೆನಪಿನ ಶಕ್ತಿ ಉತ್ತಮವಾಗಿ ಕೆಲಸ ಮಾಡುತ್ತಿದ್ದುದು ಗಮನಕ್ಕೆ ಬಂತು. ಮೆದುಳಿನ ಕ್ರಿಯೆಯನ್ನು ಗಮನಿಸಲು ಎಲೆಕ್ಟ್ರಾನಿಕ್ ಸೆಫಲೊಗ್ರಾಮ್ (ಇಇಜಿ) ಅನ್ನು ಪ್ರತಿಯೊಬ್ಬರಿಗೂ ಅಳವಡಿಸಲಾಗಿತ್ತು. ದೀರ್ಘ ನಿದ್ರಾವಸ್ಥೆಯಲ್ಲಿರುವವರ ಮೆದುಳು ಸಾಕಷ್ಟು ಚುರುಕಾಗಿ ಕೆಲಸ ಮಾಡುತ್ತಿರುವುದನ್ನು ಈ ಯಂತ್ರ ಪತ್ತೆ ಮಾಡಿದೆ. ಇಷ್ಟೇ ಅಲ್ಲದೆ, ನಿದ್ರೆ ಮಾಡದವರ ನೆನಪಿನ ಶಕ್ತಿಯು ಮಾಡಿದವರಿಗಿಂತ 10 ಗಂಟೆ ಹಿಂದಿರುತ್ತದೆ ಎಂದೂ ಈ ತಂಡ ಹೇಳಿದೆ.

ಹೀಗಾಗಿ ನೆನಪಿನ ಶಕ್ತಿಯ ಸಾಮರ್ಥ್ಯ ಹೆಚ್ಚಿಸಲು ಕಣ್ಣು ತುಂಬಾ ನಿದ್ರೆ ಮಾಡುವುದು ಅತ್ಯವಶ್ಯಕ ಎಂದು ಹೇಳಲಾಗಿದೆ.

## ರಕ್ತನಾಳ ಹಾನಿ ಪತ್ತೆ

ಮಧುಮೇಹಿಗಳಲ್ಲಿ ಸಂಭವಿಸುತ್ತಿರುವ ರಕ್ತ ನಾಳ ಹಾನಿಗೆ ಕಾರಣ ಪತ್ತೆಯಾಗಿದೆ. ವಾಷಿಂಗ್‌ಟನ್ ವೈದ್ಯಕೀಯ ವಿಶ್ವವಿದ್ಯಾಲಯದ ಸಂಶೋಧನಾ ತಂಡವು ರಕ್ತನಾಳ ಹಾನಿ ಕುರಿತು ಅಧ್ಯಯನ ನಡೆಸಿ ಯಶಸ್ವಿಯಾಗಿದೆ.

ಬಹುತೇಕ ಮಧುಮೇಹಿಗಳಿಗೆ ಕಾಡುವ ಹೃದಯಾಘಾತ, ದೃಷ್ಟಿ ಹೀನತೆ, ಪಾರ್ಶ್ವವಾಯು ವಿನಂಥ ಕಾಯಿಲೆಗಳಿಗೆ ರಕ್ತನಾಳ ಹಾನಿಯೇ ಪ್ರಮುಖ ಕಾರಣ. ಈ ಹಾನಿಗೆ ಕಾರಣ ಪತ್ತೆ ಮಾಡಿರುವ ಸಂಶೋಧಕರು, ದೇಹದಲ್ಲಿರುವ ಎರಡು ಬಗೆಯ ಕಿಣ್ವಗಳು, ಫ್ಯಾಟಿ ಆ್ಯಸಿಡ್ ಸಿಂಥೇಸ್ (ಎಫ್‌ಎಎಸ್) ಹಾಗೂ ನೈಟ್ರಿಕ್ ಆಕ್ಸೈಡ್ ಸಿಂಥೇಸ್ (ಎನ್‌ಒಎಸ್)ಗಳು ಪರಸ್ಪರ ಜೀವಕೋಶದಲ್ಲಿ ಸೇರಿಕೊಂಡು ರಕ್ತನಾಳದ ಪ್ರತಿಬಂಧಕಕ್ಕೆ ಹಾನಿ ಮಾಡುತ್ತವೆ.

ಮಧುಮೇಹಿಗಳ ರಕ್ತ ನಾಳದಲ್ಲಿರುವ ಎಂಡೋಥೆಲಿಲ್ ಎಂಬ ಜೀವಕೋಶದಲ್ಲಿನ ದೋಷ ಎಲ್ಲಕ್ಕೂ ಪ್ರಮುಖ ಕಾರಣ ಎಂದು ಈ ಹಿಂದೆಯೇ ತಿಳಿದಿತ್ತು. ಆದರೆ ಅದು ಹೇಗೆ ಕೆಲಸ ಮಾಡಲಿದೆ ಎನ್ನುವುದು ಈಗ ಗೊತ್ತಾಗಿದೆ ಎಂದು ಕ್ಲೆಯಾಚವ್ ವೀ ಹೇಳುತ್ತಾರೆ.

ಹೀಗಾಗಿ ರಕ್ತನಾಳವನ್ನು ಸುರಕ್ಷಿತವಾಗಿಡಲು ನಿಯಮಿತವಾಗಿ ಉತ್ತಮ ಔಷಧ ಸೇವನೆ ಅತ್ಯಗತ್ಯ ಎಂದು ವೀ ಹೇಳುತ್ತಾರೆ.

## ಚಿಕನ್ ಪ್ರಿಯರಿಗೆ ಸಿಹಿ ಸುದ್ದಿ

ಹಕ್ಕಿ ಜ್ವರ ಬಂದ ಕೆಲವೇ ದಿನಗಳಲ್ಲಿ ವಿಶ್ವದಾದ್ಯಂತ ಕೊಟ್ಯಂತರ ಕೋಳಿಗಳ ಮಾರಣಹೋಮ ನಡೆಯಿತು. ಜತೆಗೆ ಕೋಳಿ ತಿಂದರೆ ತಮಗೆಲ್ಲಿ ಜ್ವರ ಬರುವುದೋ ಎಂದು ಹೆದರಿ ಹಲವರು ಕೋಳಿ ಖಾದ್ಯಗಳನ್ನು ತ್ಯಜಿಸಿದರು. ಆದರೆ ಇನ್ನು ಮುಂದೆ ಹೀಗಾಗದು.



ಏಕೆಂದರೆ, ಕುಲಾಂತರಿ ಕೋಳಿ ತಳಿಯೊಂದನ್ನು ಎಡಿನ್‌ಬರ್ಗ್ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಈ ಕೋಳಿಯ ವಿಶೇಷವೆಂದರೆ ಹಕ್ಕಿ ಜ್ವರ ಹರಡುವ 'ಅವಿಯನ್ ಇನ್‌ಫ್ಲುಯೆನ್ಸಾ ವೈರಸ್' ಅನ್ನು ನಿಯಂತ್ರಿಸುವ ತಾಕತ್ತು ಇದೆಯಂತೆ.

ಈ ಕುಲಾಂತರಿ ಕೋಳಿಗೆ ಬಂದ ಜ್ವರ ಪಕ್ಕದ ಕೋಳಿಗೂ ಹರಡದಂತೆ ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ಜೈವಿಕ ತಂತ್ರಜ್ಞಾನ ಹಾಗೂ ಜೀವಶಾಸ್ತ್ರ ವಿಭಾಗದ ವೈದ್ಯಕೀಯ ಸಂಶೋಧನಾ ಸಮಿತಿಯು ಪ್ರಮುಖ ಪಾತ್ರವಹಿಸಿದೆ.

'ಕೋಳಿಗಳು ಹೊಸ ರೋಗಾಣುಗಳನ್ನು ತನ್ನೊಳಗೆ ಉತ್ಪತ್ತಿ ಮಾಡುವ ಹಾಗೂ ಮಾನವರಿಗೆ ಸುಲಭವಾಗಿ ಹರಡುವ ವ್ಯವಸ್ಥೆ ಹೊಂದಿದೆ. ಜತೆಗೆ ಜಗತ್ತಿನಲ್ಲಿ ಚಿಕನ್ ಖಾದ್ಯ ಪ್ರಿಯರ ಸಂಖ್ಯೆ ಹೆಚ್ಚಿರುವುದರಿಂದ ಅವರ ಆರೋಗ್ಯದ ಕುರಿತೂ ಕಾಳಜಿ ವಹಿಸಬೇಕಾದುದು ಅನಿವಾರ್ಯ. ಹೀಗಾಗಿ ರೋಗಾಣುಗಳನ್ನು ಹರಡದ ಕೋಳಿಗಳ ಅಭಿವೃದ್ಧಿಯತ್ತ ಗಮನ ಹರಿಸಿ ಅಭಿವೃದ್ಧಿಪಡಿಸಲಾಗಿದೆ' ಎಂದು ಪ್ರೊ.ಹೆಲೆನ್ ಸಾಂಗ್ ಹೇಳುತ್ತಾರೆ.

ಈ ಕುಲಾಂತರಿ ಕೋಳಿ ತಳಿಯ ಅಭಿವೃದ್ಧಿಯಲ್ಲಿ 'ಡೆಕೊಯ್' ಎಂಬ ಜೀನ್ ಬಳಸಲಾಗಿದ್ದು, ಅದು ರೋಗಾಣುಗಳು ದ್ವಿಗುಣಗೊಳ್ಳುವ ಪ್ರಕ್ರಿಯೆಗೆ ತಡೆಯೊಡ್ಡಲಿದೆಯಂತೆ. ಈ ಕೋಳಿ ಈಗ ಸಂಶೋಧನಾ ಹಂತದಲ್ಲಿದ್ದು, ಇನ್ನೂ ಮಾರುಕಟ್ಟೆ ಪ್ರವೇಶಿಸಿಲ್ಲ. ಹೀಗಾಗಿ ರೋಗಮುಕ್ತ ಕುಲಾಂತರಿ ಕೋಳಿಗಾಗಿ ಚಿಕನ್ ಪ್ರಿಯರು ಇನ್ನಷ್ಟು ದಿನ ಕಾಯಬೇಕಿದೆ.

■ ಇಎಸ್‌ಎಸ್




ಬಿಳಿ ಮಚ್ಚೆಗಳಿ

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯರನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯಾ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗುಪ್ತ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು- ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.



ಆಕರ್ಷಕ ಸ್ತನಗಳಿಗೆ

ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881

09934068051 / 09386023246

09934066680